ಅಸಲು ದಾವೆ ಸಂಖ್ಯೆ - 151/2019
ಪಿಡಬ್ಲ್ಯೂ - 01
ದಿನಾಂಕಃ 06-07-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿಗಳ ಪರ ಶ್ರೀ. ಎಂ ಎಂ ಪಿ ವಕೀಲರಿಂದ**

ದಾವಾ ಆಸ್ತಿಯ ಸರ್ವೇ ನಂಬರಗಳು ಮತ್ತು ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ಸರ್ವೇ ನಂಬರ 4/3 ರ ಪೂರ್ವಕ್ಕೆ ರಸ್ತೆ ಇದೆ, ಪಶ್ಚಿಮಕ್ಕೆ ವೆಂಕಟಪ್ಪಗೌಡರವರ ಜಮೀನು, ಉತ್ತರಕ್ಕೆ

ಲಟ್ಟಪ್ಪರವರ ಜಮೀನು, ದಕ್ಷಿಣಕ್ಕೆ ಬಚ್ಚಪ್ಪಗೌಡರವರ ಜಮೀನು ಇರುತ್ತದೆ. ಸರ್ವೇ ನಂಬರ 4/3 ಒಟ್ಟಾರೆಯಾಗಿ ಎಷ್ಟು ಎಕರೆ ಇದೆ ಎಂದರೆ 4 ಎಕರೆ 22 ಗುಂಟೆ ಇದೆ. ಸುಮಾರು 25 ವರ್ಷದ ಹಿಂದೆ ಸದರಿ ಸರ್ವೇ ನಂಬರಗಳಲ್ಲಿ ಪ್ಲಾಟಗಳು ಆಗಿದೆ ಎಂದರೆ ನಮಗೇನು ಹೇಳಿರುವುದಿಲ್ಲ ಆದರೆ ಪ್ಲಾಟುಗಳು ಆಗಿರುತ್ತವೆ. ಪ್ಲಾಟುಗಳು ಆಗಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸುಮಾರು 15-20 ವರ್ಷದ ಹಿಂದೆ ಸುಮಾರು 12 ರಿಂದ 15 ಜನರು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 20 ವರ್ಷದಿಂದ ನೀವು ಸದರಿ ಹೊಲಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

ಸದರಿ ಜಮೀನಿನಲ್ಲಿ ಮನೆಗಳು ಕಟ್ಟಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಿಮ್ಮ ಹೆಸರನ್ನು ಎಷ್ಟು ವರ್ಷದ ಹಿಂದೆ ತೆಗೆದು ಹಾಕಲಾಗಿದೆ ಎಂದರೆ ಸುಮಾರು 20 ವರ್ಷದ ಹಿಂದೆ ತೆಗೆದು ಹಾಕಿರುತ್ತಾರೆ. ಉತಾರ ಬದಲಾಗಿದ್ದು ನಿಮಗೆ ಯಾವಾಗ ತಿಳಿಯಿತು ಎಂದರೆ ಸುಮಾರು 15 ವರ್ಷದ ಹಿಂದೆಯೇ ತಿಳಿದಿರುತ್ತದೆ ಆದ್ದರಿಂದ ದಾವೆ ಸಲ್ಲಿಸಿರುತ್ತೇವೆ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ನೀವು ಪ್ರತಿವಾದಿಗಳಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. 1 ನೇ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಎಂ.ಇ ನಂಬರ 1030/1994-95 ರಂತೆ ಪ್ರತಿವಾದಿ 1 ರಿಂದ 4 ನೇರವರ ಹೆಸರಿಗೆ ಖಾತೆ ದಾಖಲೆ ಆಗಿರುತ್ತದೆ ಎಂದರೆ ಅದು ಅವರು ಮಾಡಿಕೊಂಡಿರುತ್ತಾರೆ. ದಿಃ31-05-1994 ರಂದು 1 ರಿಂದ 4 ನೇ ಪ್ರತಿವಾದಿಗಳಿಂದ ರೂ.24,000/-ಗಳನ್ನು ಪಡೆದು ದಾವಾ ಆಸ್ತಿಗಳ ಹಕ್ಕನ್ನು ಹಕ್ಕು ಬಿಡುಗಡೆ ಪತ್ರದ ಮುಖಾಂತರ ಬಿಟ್ಟುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ದಿಃ29-03-1995 ರಂದು ನೀವು ಪ್ರತಿವಾದಿ 2 ರಿಂದ 3 ನೇದವರಿಗೆ 1 ನೇ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಸಂಚಗಾರ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಿಮ್ಮ ಸಹಿ ಇದೆ ಎಂದರೆ ಸರಿಯಲ್ಲ.

ದಿಃ29-03-1995 ರಂದು ನೀವು 2 ರಿಂದ 4 ನೇ ಪ್ರತಿವಾದಿಗಳಿಗೆ 1 ನೇ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಒಪ್ಪಿಗೆ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸರಿಯಲ್ಲ.

ವೀರಭದ್ರಗೌಡ ನನ್ನ ತಮ್ಮನಾಗಬೇಕು. ಅವರು ಸಹ ಹಕ್ಕು ಬಿಡುಗಡೆ ಪತ್ರ ಮತ್ತು ಸಂಚಗಾರ ಪತ್ರವನ್ನು ಪ್ರತಿವಾದಿಗಳಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಅವರು

ಮಾಡಿಕೊಟ್ಟಿರಬಹುದು ನಾನು ಮಾಡಿಕೊಟ್ಟಿರುವುದಿಲ್ಲ. ನೀವು ದಿಃ09-05-1995 ರಂದು 2 ರಿಂದ 4 ನೇ ಪ್ರತಿವಾದಿಯರಿಗೆ 1 ನೇ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಖರೀದಿ ಸಂಚಗಾರ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಾಲ್ಕು ಜನ ಸಾಕ್ಷಿದಾರರು ಸಹ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1995 ರಲ್ಲಿ ನೀವು ಪ್ರತಿವಾದಿಯಗೆ 1 ನೇ ದಾವಾ ಆಸ್ತಿಯನ್ನು ಬರೆದುಕೊಟ್ಟಿದ್ದರಿಂದ ಆ ಜಮೀನಿಗೆ ನೀವು ಹೋಗಲೆ ಇಲ್ಲ ಎಂದರೆ ಸರಿಯಲ್ಲ ನಾವು ಆಗಾಗ ಹೋಗಿ ಬರುತ್ತಿದ್ದೆವು.

ಚಳ್ಳಾಳ ಗ್ರಾಮದಲ್ಲಿ ನೀವು ವಸತಿ ಉಳಿದಿಲ್ಲ ಎಂದರೆ ನಾವು ಆಗಾಗ ಹೋಗಿ ಬರುತ್ತಿದ್ದೆವು. 1 ರಿಂದ 8 ನೇ ಪ್ರತಿವಾದಿಗಳು ನಿಮ್ಮ ಅಣ್ಣನ ಮಕ್ಕಳು ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿಗಳಿಂದ ನೀವು ಹಕ್ಕು ಬಿಡುಗಡೆ ಪತ್ರವನ್ನು ಮತ್ತು ಖರೀದಿ ಸಂಚಗಾರ ಪತ್ರವನ್ನು ಬರೆದುಕೊಟ್ಟಾಗ ರೂ.24,000/- ಗಳನ್ನು ಎರಡು ಬಾರಿ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಶಿವಯ್ಯ ಗಂಜಿಕಟ್ಟಿಮಠ ಮತ್ತು ಯಲ್ಲಣ್ಣಗೌಡ ಬಚಪ್ಪಗೌಡರ ಸಮಕ್ಷಮ ರೂ.48,000/- ಗಳನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. 1995 ರಿಂದ 1 ನೇ ದಾವಾ ಆಸ್ತಿಯನ್ನು ನಮ್ಮ ಅಣ್ಣನ ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಅಂದಿನಿಂದ ಇಲ್ಲಿಯವರೆಗೂ ನೀವು ಸಾಗುವಳಿ ಮಾಡಿಲ್ಲ ಎಂದರೆ ನಾವು ಸಾಗುವಳಿ ಮಾಡಲು ಆಗದಿದ್ದ ಕಾರಣ ನಮ್ಮ ಅಣ್ಣನ ಮಕ್ಕಳಿಗೆ ಸಾಗುವಳಿ ಮಾಡಲು ಹೇಳಿರುತ್ತೇವೆ.

ಬನ್ನಿಕೊಪ್ಪ ಗ್ರಾಮದಲ್ಲಿ ನೀವು ಒಂದುವರೆ ಎಕರೆ ಹೊಲವನ್ನು ಖರೀದಿ ಮಾಡಿರುತ್ತೀರಿ ಎಂದರೆ ನಮ್ಮ ಮಕ್ಕಳು ಖರೀದಿ ಮಾಡಿರುತ್ತಾರೆ. ಬನ್ನಿಕೊಪ್ಪ ಗ್ರಾಮದಲ್ಲಿ ನಿಮ್ಮ ಮತ್ತು ನಿಮ್ಮ ತಮ್ಮ ವೀರಭದ್ರಗೌಡರವರ ಐಷಾರಾಮಿ ಮನೆಗಳು ಇವೆ ಎಂದರೆ ಸರಿ. ನೀವು ಖರೀದಿ ಮಾಡಿದ ಒಂದುವರೆ ಎಕರೆ ಹೊಲ, ನಿಮ್ಮ ಮತ್ತು ವೀರಭದ್ರಗೌಡರವರ ಐಷಾರಾಮಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸೇರಿಸಲು ಬರುವುದಿಲ್ಲ. 1 ನೇ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಉಪ ವಿಭಾಗಾಧಿಕಾರಿಗಳು ಸವಣೂರು ಇವರಲ್ಲಿ ಆರ್.ಟಿ.ಎಸ್/56/2006-07 ಅನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಸದರಿ ಪ್ರಕರಣವು ನಮ್ಮಂತೆಯೇ ಆಗಿರುತ್ತದೆ. ಪ್ರತಿವಾದಿಗಳು ಉಪ ವಿಭಾಗಾದಿಕಾರಿಗಳ ಆದೇಶವನ್ನು ಮೇಲ್ಮನವಿ ಸಲ್ಲಿಸಿದ್ದರಿಂದ ಜಿಲ್ಲಾಧಿಕಾರಿಗಳು ಪ್ರತಿವಾದಿಯರಂತೆ ಆದೇಶ ಹೊರಡಿಸಿರುತ್ತಾರೆ ಎಂದರೆ ಸರಿ.

ಹಕ್ಕು ಬಿಡುಗಡೆ ಪತ್ರ ಮತ್ತು ಖರೀದಿ ಸಂಚಗಾರ ಪತ್ರದಿಂದ ಬಂದ ಹಣದಿಂದ ಬನ್ನಿಕೊಪ್ಪ ಗ್ರಾಮದಲ್ಲಿ ಒಂದುವರೆ ಎಕರೆ ಜಮೀನು ಮತ್ತು ಎರಡು ಮನೆಯನ್ನು ಕಟ್ಟಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ಮಕ್ಕಳು ಬೇರೆ ಬೇರೆ ಇದ್ದೀರಿ ಎಂದರೆ ಸರಿ. ಪ್ರತಿವಾದಿಗಳಿಂದ ಹಣ ಪಡೆದಿದ್ದರೂ ಸಹ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. 1991-92 ರಿಂದ ಇಲ್ಲಿಯವರೆಗೂ ಪ್ರತಿವಾದಿಗಳಿಗೆ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ನಾವು ಸಹ ಸಾಗುವಳಿ ಮಾಡುತ್ತಾ ಇರುತ್ತೇವೆ. 1 ನೇ ದಾವಾ ಆಸ್ತಿಯಲ್ಲಿ ನೀವು ಯಾವ ವರ್ಷ ಸಾಗುವಳಿ ಮಾಡಿರುತೀರಿ, ಯಾವ ಬೆಳೆ ಬೆಳೆದಿರುತ್ತೀರಿ ಎಂದು ಹೇಳಲು ಆಗುತ್ತದೆಯೆ ಎಂದರೆ ನನಗೆ ನೆನಪಿಲ್ಲ.

ಬನ್ನಿಕೊಪ್ಪ ಗ್ರಾಮದಲ್ಲಿ ನಾವು ಸುಮಾರು 20 ರಿಂದ 25 ವರ್ಷದಿಂದ ವಾಸವಿದ್ದೇವೆ. ಬನ್ನಿಕೊಪ್ಪದಿಂದ ಚಳ್ಳಾಳ ಗ್ರಾಮ 25 ಕಿ.ಮೀ ಆಗುತ್ತದೆ ಎಂದರೆ ಸರಿ. ಬನ್ನಿಕೊಪ್ಪ ಗ್ರಾಮದಿಂದ ಚಳ್ಳಾಳ ಗ್ರಾಮಕ್ಕೆ ಎತ್ತುಗಳನ್ನು ಕರೆದುಕೊಂಡು ಬಂದು 1 ನೇ ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡಿರುತ್ತೀರಾ ಎಂದರೆ ಸರಿ. ಎತ್ತನ್ನು ನಾವು ಚಳ್ಳಾಳ ಗ್ರಾಮಕ್ಕೆ ಹೊಡೆದುಕೊಂಡು ಬರುತ್ತಿದ್ದೆವು ಎಂದರೆ ಸರಿ. 1 ನೇ ದಾವಾ ಆಸ್ತಿ ತಲುಪಲು ಎಷ್ಟು ಹೊತ್ತು ಆಗುತ್ತಿತ್ತು ಎಂದರೆ ನಾವು ಸುಮಾರು ಬೆಳಗಿನ ಜಾವಾ 4.00 ಗಂಟೆಗೆ ಮನೆಯನ್ನು ಬಿಟ್ಟು ಸುಮಾರು 7.00, 8.00 ಗಂಟೆಗೆ ತಲುಪುತ್ತಿದ್ದೆವು. ಎರಡು ದಿನ ಚಳ್ಳಾಳ ಗ್ರಾಮದಲ್ಲಿ ವಾಸವಿದ್ದು, ನಂತರ ಬನ್ನಿಕೊಪ್ಪ ಗ್ರಾಮಕ್ಕೆ ಹೋಗುತ್ತಿದ್ದೆವು. ಚಳ್ಳಾಳ ಗ್ರಾಮದಲ್ಲಿ ಎಲ್ಲಿ ವಾಸವಾಗುತ್ತಿದ್ದೀರಿ ಎಂದರೆ ನಮ್ಮ ತಂದೆ ತಾಯಿಯ ಮನೆಯಲ್ಲಿ ವಾಸವಾಗುತ್ತಿದ್ದೆವು. ಸದರಿ ಮನೆ ನಂಬರ 31 ಆಗಿರುತ್ತದೆ. ಸದರಿ ಮನೆಯು ಈ ಹಿಂದೆ ತಿರಕನಗೌಡ ಎಂಬುವವರ ಹೆಸರಿನಲ್ಲಿ ಇತ್ತು ಈಗ ಯಾವ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನಾವು ವಾಸ ಮಾಡುವ ವೇಳೆಯಲ್ಲಿ ಸದರಿ ಮನೆಯು ತಿರಕನಗೌಡನ ಹೆಸರಿನಲ್ಲಿಯೇ ಖಾತೆ ಇತ್ತು. ಸದರಿ ಮನೆಯು ತಿರುಕನಗೌಡನ ಹೆಸರಿನಲ್ಲಿತ್ತು ಎಂದರೆ ಸರಿ ಆದರೆ ನಮ್ಮ ಅಣ್ಣನ ಮಕ್ಕಳು ಅದನ್ನು ತಿಪ್ಪನಗೌಡನ ಹೆಸರಿನಲ್ಲಿ ಬದಲಾಯಿಸಿರುತ್ತಾರೆ. ಸದರಿ ಮನೆಯು 1995 ರ ಹಿಂದೆಯೇ 1 ರಿಂದ 4 ನೇ ಪ್ರತಿವಾದಿಗಳ ತಂದೆಯಾದ ಮಲ್ಲನಗೌಡ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ ಆದರೆ ನಂತರ ಅವನ ಮಕ್ಕಳು ಖಾತಾ ಬದಲಾವಣೆ ಮಾಡಿಕೊಂಡಿರುತ್ತಾರೆ.

1995 ರ ನಂತರ ನೀವು ಚಳ್ಳಾಳ ಗ್ರಾಮಕ್ಕೆ ಹೋಗಿರುವುದಿಲ್ಲ ಮತ್ತು ಒಕ್ಕಲುತನವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಮಾಡುವ ಸಲುವಾಗಿ ಅವರ ವಿರುದ್ಧ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಹಿರಿಯರ ಸಮಕ್ಷಮ ಎರಡು ಬಾರಿ ಹಣವನ್ನು ಪಡೆದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. 1030/1994-95 ರ ಅರ್ಜಿಯಲ್ಲಿ ನೀವು ಸಹಿ ಮಾಡಿ ಕೊಟ್ಟಿರುತ್ತೀರಿ ಎಂದರೆ ಅಧಿಕಾರಿಗಳು ಆ ದಾಖಲೆ ಸುಟ್ಟು ಹೋಗಿದೆ ನೀವು ಸಹಿ ಮಾಡಿ ಅರ್ಜಿ ಕೊಟ್ಟರೆ ಸರಿ ಮಾಡುತ್ತೇವೆ ಎಂದಿದ್ದರಿಂದ ನಾನು ಸಹಿ ಮಾಡಿ ಅರ್ಜಿಯನ್ನು ಕೊಟ್ಟಿರುತ್ತೇನೆ.

ಒಪ್ಪಿಗೆ ಪತ್ರ, ಹಕ್ಕು ಬಿಡುಗಡೆ ಪತ್ರ ಮತ್ತು ಖರೀದಿ ಸಂಚಗಾರ ಪತ್ರದಲ್ಲಿ ಸಹಿ ಮಾಡಿರುವ ಸಾಕ್ಷಿದಾರರು ಮರಣ ಹೊಂದಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.